# ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ – ಕರ್ನಾಟಕ
## ರಾಜ್ಯ ಯೋಜನಾ ನಿರ್ದೇಶಕರು ಕಛೇರಿ,ಹೊಸ ಸಾರ್ವಜನಿಕ ಕಛೇರಿ ಪೂರಕ ಕಟ್ಟಡಗಳು
## ಕೆ.ಆರ್.ಸರ್ಕಲ್,ನೃಪತುಂಗ ರಸ್ತೆ,ಬೆಂಗಳೂರು–560001

ಸಂಖ್ಯೆ:–ಆರ್.ಎಂ.ಎಸ್.ಎ/ದಾಖಲಾತಿ/01/2013–14

ದಿನಾಂಕ:–28/06/2013

ಗೆ,

ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
————————ಜಿಲ್ಲೆ.

ಮಾನ್ಯರೆ,

ವಿಷಯ :– 74 ಆದರ್ಶ ವಿದ್ಯಾಲಯಗಳಲ್ಲಿ 2013–14 ನೇ ಸಾಲಿಗೆ 6 ನೇ,7 ನೇ 8 ನೇ ಹಾಗೂ 9 ನೇ ತರಗತಿಗೆ ದಾಖಲಾತಿ ಪ್ರಕ್ರಿಯೆಯ ದಿನಾಂಕವನ್ನು ವಿಸ್ತರಿಸುವ ಕುರಿತು.

ಉಲ್ಲೇಖ:– ಆರ್.ಎಂ.ಎಸ್.ಎ/ಆವಿ/ದಾಖಲಾತಿ/01/2013–14, ದಿನಾಂಕ:–22–05–2013

*****************

ಮೇಲ್ಕಂಡ ವಿಷಯ ಹಾಗೂ ಉಲ್ಲೇಖದನ್ವಯ 74 ಆದರ್ಶ ವಿದ್ಯಾಲಯಗಳಿಗೆ 6ನೇ ತರಗತಿಯ ದಾಖಲಾತಿ ಪ್ರಕ್ರಿಯೆಗಾಗಿ ದಿನಾಂಕ 27–05–2013 ರಿಂದ 30–06–2013 ರವರೆಗೆ ಗಡುವು ನೀಡಲಾಗಿತ್ತು. ಆದರೆ ಕೆಲವು ಅದರ್ಶ ವಿದ್ಯಾಲಯಗಳಲ್ಲಿ ಇದುವರೆಗೂ 6ನೇ, 7ನೇ, 8ನೇ ಹಾಗೂ 9ನೇ ತರಗತಿಗಳಿಗೆ ಪ್ರತಿ ತರಗತಿಗೆ 80 ವಿದ್ಯಾರ್ಥಿಗಳು ದಾಖಲಾಗಿರುವುದು ಕಂಡು ಬಂದಿರುವುದಿಲ್ಲ. ಈ ಹಿನ್ನೆಲೆಯಲ್ಲಿ ದಾಖಲಾತಿ ಪ್ರಕ್ರಿಯೆಯ ದಿನಾಂಕವನ್ನು 30–06–2013 ರಿಂದ 15–07–2013 ರ ವರೆಗೆ ವಿಸ್ತರಿಸಲಾಗಿದೆ **ಎಂಬ ಮಾಹಿತಿಯನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಸಂಬಂಧಿಸಿದ ಆದರ್ಶ ವಿದ್ಯಾಲಯದ ಮುಖ್ಯೋಪಾಧ್ಯಾಯರಿಗೆ ಪ್ರತಿ ತರಗತಿಗೆ 80 ವಿದ್ಯಾರ್ಥಿಗಳು ದಾಖಲಾಗಲು ಸೂಕ್ತ ಕ್ರಮ ಕೈ ಗೊಳ್ಳಲು ಆದೇಶಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.** 6ನೇ, 7ನೇ, 8ನೇ ಮತ್ತು 9 ನೇ ತರಗತಿಗಳಿಗೆ ದಾಖಲಾತಿ ಪ್ರಕ್ರಿಯೆಯನ್ನು ನಿರ್ವಹಿಸಲು ನಮ್ಮ ರಾಜ್ಯ ಕಛೇರಿಯಿಂದ ಈಗಾಗಲೇ ಉಲ್ಲೇಖ:–ಆರ್.ಎಂ.ಎಸ್.ಎ/ದಾಖಲಾತಿ/01/2013–14,ದಿನಾಂಕ:–22/05/2013 ಪತ್ರದ ಅನ್ವಯ ದಾಖಲಾತಿಯನ್ನು ನಿರ್ವಹಿಸುವುದು ಎಂದು ಈ ಮೂಲಕ ತಿಳಿಸಲಾಗಿದೆ.

ವಂದನೆಗಳೊಂದಿಗೆ,

ನಿರ್ದೇಶಕರು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ
ಬೆಂಗಳೂರು

ಪ್ರತಿಗಳು,

1) ಕಛೇರಿ ಪ್ರತಿ